ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಿ.ವಿ.ರಾಮನ್‌ನಗರ ಉಪ ವಿಭಾಗ, ವಾರ್ಡ್ ಸಂಖ್ಯೆ:79, ಸರ್ವಜ್ಞನಗರ ವಾರ್ಡ್ ಸಮಿತಿ ಸಭೆ, ದಿನಾಂಕ:18-07-2022 ರ ಸಭಾ ನಡವಳಿಗಳು**

ದಿನಾಂಕ: **18-07-2022** ರಂದು ಬೆಳಗ್ಗೆ 10.30 ಗಂಟೆಗೆ ವಾರ್ಡ್-79 ಸರ್ವಜ್ಞನಗರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಎಂ.ಎಂ.ರಸ್ತೆಯಲ್ಲಿರುವ ಪಾಲಿಕೆಯ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಆರ್ ಡಬ್ಲ್ಯೂ ಎ**

1. ಶ್ರೀ.ಮುರಳಿ ಸದಸ್ಯರು
2. ಶ್ರೀ.ನಾರಾಯಣಸ್ವಾಮಿ ಸದಸ್ಯರು
3. ಶ್ರೀ.ಸಂಜೋಗ್ ಸದಸ್ಯರು
4. ಶ್ರೀಮತಿ.ಚಂದ್ರಿಕಾ ರಾಜ್ ಸದಸ್ಯರು

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಮಟ್ಟದ ಅಧಿಕಾರಿ/ನೌಕರರು**

1. ಶ್ರೀ.ಡಾ॥ಮಹಮೂದ್ ಅಬ್ಬಾಸ್ ನೋಡೆಲ್ ಅಧಿಕಾರಿಗಳು, ವಾರ್ಡ್ ಸಂಖ್ಯೆ:79, ಸರ್ವಜ್ಞನಗರ
2. ಶ್ರೀ.ನರಸಿಂಹಯ್ಯ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ವಾರ್ಡ್ ಸಂಖ್ಯೆ:79, ಸರ್ವಜ್ಞನಗರ
3. ಶ್ರೀಮತಿ.ದಿವ್ಯ ಕಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ.ಶಿವಸಿದ್ದಯ್ಯ, ಟ್ರಾಫಿಕ್ ಪೋಲೀಸ್
5. ಶ್ರೀ.ಸೋಮಶೇಖರ್ ಬೆಸ್ಕಾಂ

ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವ ಎಲ್ಲಾ ಇಲಾಖೆ ಹಾಗೂ ಸಾರ್ವಜನಿಕರಿಗೆ ಸ್ವಾಗತ ಕೋರಿದರು. ಹಾಗೂ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ಸಭೆಯಲ್ಲಿ ತಿಳಿಸಲು ಕೋರಿ ಸಭೆಯನ್ನು ಆರಂಭಿಸಲಾಯಿತು.

**ಸಭೆಯಲ್ಲಿ ಚರ್ಚಿಸಿದ ವಿಷಯಗಳು:-**

| ಕ್ರ. ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ |
|---|---|---|
| | **ಕಾಮಗಾರಿ ಇಲಾಖೆ (Engineering)** | |
| 1 | ವಾರ್ಡ್ ವ್ಯಾಪ್ತಿಯ ರಾಮಕೃಷ್ಣಪ್ಪ ರಸ್ತೆ, ಚಾರ್ಲ್ಸ್ ಕ್ಯಾಬೆಲ್ ರಸ್ತೆ, ಕಲ್ಪಹಳ್ಳಿ ಮುಖ್ಯರಸ್ತೆ ಹಾಗೂ ಪಿ.ಎಸ್.ಕೆ ನಾಯ್ಡು ರಸ್ತೆಗಳಲ್ಲಿರುವ ಡೆಬ್ರಿಸ್‌ನ್ನು ತೆರವುಗೊಳಿಸಲು ಶ್ರೀ.ಸಂಜೋಗ್ ರವರು ಕೋರಿದರು.<br>ಹಾಗೂ ಸಹಾಯಕ ಅಭಿಯಂತರರಿಗೆ ಡಬ್ರೀಸ್ ಇರುವ ಸ್ಥಳಗಳನ್ನು ಜಂಟಿಯಾಗಿ ತಪಾಸಣೆ ನಡೆಸಿದರು, ಇದನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದುದೆಂದು ತಿಳಿಸಿದರು. | **Assistant Engineer-BBMP** |
| 2 | ಶ್ರೀ.ನಾರಾಯಣ ಸ್ವಾಮಿ ರವರು ಮಾತನಾಡಿ ಅಸ್ಸಾಯೆ ರಸ್ತೆಯಲ್ಲಿರುವ ಸಾರ್ವಜನಿಕ ಶೌಚಾಲಯ ದುರಸ್ಥಿಯಲ್ಲಿದ್ದು, ಇದನ್ನು ಸರಿಪಡಿಸಲು ಕೋರಿದರು.<br>ವಾರ್ಡ್‌ನ ಸಹಾಯಕ ಅಭಿಯಂತರರು ಮಾತನಾಡಿ ದುರಸ್ಥಿಪಡಿಸಲಾಗುವುದು ಹಾಗೂ ಘನತ್ಯಾಜ್ಯ ನಿರ್ವಹಣೆ ಇಲಾಖೆಯವರಿಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು. | **Assistant Engineer-BBMP** |
| | **ಬೃಹತ್ ನೀರು ಗಾಲುವೆ (SWD)** | |
| 1 | ಶ್ರೀ.ಶಿವಸಿದ್ದಯ್ಯ ಟ್ರಾಫಿಕ್ ಪೋಲೀಸ್ ರವರು ಮಾತನಾಡಿ ಎಂ.ಎಂ.ರಸ್ತೆಯಲ್ಲಿ ಬೃಹತ್ ನೀರುಗಾಲುವೆಗೆ ಹೊಂದಿಕೊಂಡತೆ ಬೃಹತ್ ಗುಂಡಿ ಬಿದ್ದಿರುತ್ತದೆ ಎಂದು ತಿಳಿಸಿದರು. ಇದರ ಬಗ್ಗೆ ಕ್ರಮ ಕೈಗೊಳ್ಳಲು ಶ್ರೀ.ವಿಕ್ರಾಂತ್, ಸಹಾಯಕ ಅಭಿಯಂತರರು, ಬೃಹತ್ ನೀರುಗಾಲುವೆ ರವರಿಗೆ ದೂರವಾಣಿ ಮುಖಾಂತರ ತಿಳಿಸಲಾಯಿತು. | **Assistant Engineer-SWD** |

| | | |
|---|---|---|
| | **ಬೆಂಗಳೂರು ಜಲ ಮಂಡಳಿ (BWSSB)** | |
| 1 | ರಾಮಕೃಷ್ಣಪ್ಪ ರಸ್ತೆ ಮತ್ತು ಚಾರ್ಲ್ಸ್ ಕ್ಯಾಂಬೆಲ್ ರಸ್ತೆಯಲ್ಲಿ ಸ್ಯಾನಿಟರಿ ಪೈಪ್‌ಗಳನ್ನು ಅಳವಡಿಸಲು ಸಭೆಯಲ್ಲಿದ್ದ ಶ್ರೀ ಮುರಳಿ ಸದಸ್ಯರು ಕೋರಿದರು. | **Assistant Engineer-BWSSB** |
| 2 | ಸಭೆಯಲ್ಲಿದ್ದ ಶ್ರೀ.ಮುರಳಿ ಸದಸ್ಯರು ಎಂ.ಎಂ.ರಸ್ತೆಯಲ್ಲಿರುವ ಕೆಸರಿ ಆಸ್ಪತ್ರೆ ಹಿಂಬದಿಯಲ್ಲಿ ಸ್ಯಾನಿರಿ ಪೈಪ್‌ಲೈನ್ ದುರಸ್ಥಿ ಕಾಮಗಾರಿಯನ್ನು ಕೈಗೊಳ್ಳಲು ಕೋರಿದರು.<br>ಅದರಂತೆ ನೋಡೆಲ್ ಅಧಿಕಾರಿಗಳು, ಕಾರ್ಯದರ್ಶಿಗಳು, ಶ್ರೀ.ಮಲ್ಲಪ್ಪ ಬೆಂಗಳೂರು ಜಲ ಮಂಡಳಿ ಸಹಾಯಕ ಅಭಿಯಂತರರು ಹಾಗೂ ಶ್ರೀ.ಮುರಳಿ ರವರು ಜಂಟಿಯಾಗಿ ತಪಾಸಣೆ ನಡೆಸಿದ್ದು, ಬೆಂಗಳೂರು ಜಲ ಮಂಡಳಿ ವತಿಯಿಂದ ಕಾಮಗಾರಿ ಕೆಲಸ ಪ್ರಗತಿಯಲ್ಲಿರುತ್ತದೆ. | **Assistant Engineer-BWSSB** |
| | **BESCOM** | |
| 1 | ಶ್ರೀ.ಸಂಜೋಗ್ ರವರು ಮಾತನಾಡಿ ಎಂ.ಎಂ.ರಸ್ತೆ ಹಾಗೂ ಗೋವರ್ ರಸ್ತೆ ಜಂಕ್ಷನ್‌ನಲ್ಲಿರುವ ಟ್ರಾನ್ಸ್‌ಫಾರಂಗೆ ಸುತ್ತಲೂ ತಡೆಗೋಡೆಯನ್ನು ನಿರ್ಮಿಸಲು ಕೋರಿರುತ್ತಾರೆ.<br>ಅದಕ್ಕೆ ಬೆಸ್ಕಾಂ ಸಿಬ್ಬಂಧಿಯಾದ ಶ್ರೀ.ಸೋಮಶೇಖರ್ ರವರು ಪರಿಶೀಲಿಸಲಾಗುವುದು ಎಂದು ತಿಳಿಸಿದರು. | **Assistant Engineer-BESCOM** |
| | **ಬಿ.ಬಿ.ಎಂ.ಪಿ ಸ್ಟ್ರೀಟ್‌ಲೈಟ್ಸ್ (Street Lights)** | |
| 1 | ಶ್ರೀ.ಶಿವಸಿದ್ದಯ್ಯ ಟ್ರಾಫಿಕ್ ಪೋಲೀಸ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಬೀದಿಗಳು ದೀಪಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲವೆಂದು ತಿಳಿಸಿ. ಇದನ್ನು ಸರಿಪಡಿಸಲು ಕೋರಿದರು. | **Assistant Engineer-Street Lights** |

ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ. ಕಾರ್ಯದರ್ಶಿ ವಾರ್ಡ್ ಸಮಿತಿ ಇವರಿಗೆ ಅನುಪಾಲನಾ ವರದಿಯನ್ನು ನೀಡುವುದು.

ಕಾರ್ಯದರ್ಶಿಗಳು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**ಕಾರ್ಯದರ್ಶಿಗಳು**

ಶ್ರೀ.ನರಸಿಂಹಯ್ಯ
ಸಹಾಯಕ ಅಭಿಯಂತರರು(ಪ್ರಭಾರ)
ವಾರ್ಡ್ ಸಂಖ್ಯೆ:79 ಸರ್ವಜ್ಞನಗರ

**ಅಧ್ಯಕ್ಷರು**

[illegible]
ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ:79-ಸರ್ವಜ್ಞನಗರ